<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u>

ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದನ್ವಯ ಪುನಃ ಕರೆಯಿಸಿ
ಪ್ರಮಾಣ ವಚನ ಮಾಡಲಾದ ದಿ ಃ 19.03.2024
ಪಾಟಿ ಸವಾಲು ಃ ಆರೋಪಿ ಪರ ಶ್ರೀ ಎಸ್.ಎಂ ವಕೀಲರಿಂದ

ದಿಃ 07.02.2020 ರಂದು ನಮ್ಮ ಜಮೀನಿನ ಹತ್ತಿರ ತಹಶೀಲ್ದಾರ್ ರವರು ಮಹಜರ್ ಮಾಡುವ ಕಾಲಕ್ಕೆ ಬಂದಿದ್ದು ಅವರು ಅಲ್ಲಿಂದ ಹೋದ ನಂತರ ಆರೋಪಿತರು ನನ್ನ ಮೇಲೆ ಗಲಾಟೆ ಮಾಡಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನವೀನ್ ಕುಮಾರ ನನಗೆ ದೊಣ್ಣೆಯಿಂದ ಬಲಗೈಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ರಾಜುವಿಗೆ ತಮ್ಮಣ್ಣ, ನವೀನ್, ಪವನ್ ಹಾಗೂ ಸ್ವಾಮಿ ರವರು ಗುದ್ದಲಿಯಿಂದ ಕೈಗೆ ಹೊಡೆದಿಲ್ಲ ಎಂದರೆ ಸರಿಯಲ್ಲ.

ಪೋಲೀಸರು ಮಧ್ಯಾಹ್ನ 01.30 ಸಮಯದಲ್ಲಿ ಕೃತ್ಯ ನಡೆದ ಸಮಯಕ್ಕೆ ಬಂದು ಮಹಜರ್ ಮಾಡಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾಲು.1 ಮತ್ತು 2 ಅನ್ನು ಈ ಕೇಸಿನ ಸಲುವಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಆರೋಪಿ-1 ರವರ ತಾಯಿಗೆ ಸೇರಿದ ಸ.ನಂ.80/1 ರ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ನಮ್ಮ ಜಮೀನು ಇದೆ ಎಂದು ಹೇಳುತ್ತಿದ್ದೇವೆ ಎಂದರೆ ಸರಿ. ದಿಃ 02.08.2019 ರಂದು 1 ನೇ ಆರೋಪಿ ತಾಯಿ ರವರು ನಾವು ಸರ್ಕಾರಿ ಜಾಗವನ್ನು ಅತಿಕ್ರಮಿಸಿದ್ದೇವೆಂದು ದೂರಿ ತಹಶೀಲ್ದಾರ್ ರವರಿಗೆ ಮತ್ತು ಉಪವಿಭಾಗಾಧಿಕಾರಿಯವರಿಗೆ ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ವಿರುದ್ದ 1 ನೇ ಆರೋಪಿ ತಾಯಿ ತಹಶೀಲ್ದಾರ್ ಮತ್ತು ಉಪವಿಬಾಗಾಧಿಕಾರಿಯವರಿಗೆ ದೂರು ಕೊಟ್ಟ ವಿಚಾರ ಗೊತ್ತಿದ್ದರೂ ಕೂಡ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನವೀನ್ ಮತ್ತು ತಮ್ಮಣ್ಣ ರವರ ವಿರುದ್ದ ನಾವು 1 ನೇ ಆರೋಪಿಯ ತಾಯಿ ನಮ್ಮ ವಿರುದ್ದ ತಹಶೀಲ್ದಾರ ಮತ್ತು ಉಪವಿಭಾಗಾಧಿಕಾರಿಯವರಿಗೆ ದೂರು ಕೊಟ್ಟಿದ್ದಾರೆ ಎನ್ನುವ ಕಾರಣಕ್ಕೆ ದಿಃ 16.08.2019 ರಂದು ಗಲಾಟೆ ಮಾಡಿದ್ದೇವೆಂದು ಕೆ.ಆರ್.ಸಾಗರ ಪೋಲೀಸ್ ಠಾಣೆಗೆ ನಮ್ಮ ವಿರುದ್ದ ದೂರನ್ನು ಕೊಟ್ಟಿದ್ದರು ಮತ್ತು ಅದಕ್ಕೆ ಸಂಬಂಧಿಸಿದಂತೆ ಠಾಣೆಯಲ್ಲಿ ಎನ್.ಸಿ.ಆರ್. ಕೂಡ ನೀಡಲಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ದಿಃ 03.09.2019 ರಂದು ಕೂಡ 1 ನೇ ಆರೋಪಿ ನಮ್ಮ

ವಿರುದ್ದ ಕೆ.ಆರ್.ಸಾಗರ ಪೋಲೀಸ್ ಠಾಣೆಗೆ ದೂರು ದಾಖಲು ಮಾಡಿದ್ದರು ಮತ್ತು ಅದಕ್ಕೆ ಸಂಬಂಧಿಸಿದಂತೆ ಎನ್.ಸಿ.ಆರ್ ಕೂಡ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿಃ 07.01.2020 ರಂದು ತಹಶೀಲ್ದಾರ್ ರವರು ಜಮೀನನ್ನು ತೆರವು ಮಾಡುವಂತೆ ನಮಗೆ ನೋಟೀಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ತಹಶೀಲ್ದಾರ್ ರವರು ನಮಗೆ ನೋಟೀಸ್ ನೀಡಿದ ವಿಚಾರ ಗೊತ್ತಿದ್ದರೂ ಕೂಡ ಇಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಗೊತ್ತಿಲ್ಲ. ನಾನು ನನ್ನ ದೂರಿನಲ್ಲಿ ತಿಳಿಸಿರುವಂತೆ ಕೆಲಸ ಮಾಡುತ್ತಿದ್ದ ಸ್ಥಳದ ಸ.ನಂ.1039, 1040 ಹಾಗೂ 1013 ಆಗಿತ್ತು.

ನಿಪಿ.2 ರಲ್ಲಿ ಪೋಲೀಸರು ಏನು ಬರವಣಿಗೆ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಆರೋಪಿತರ ಮೇಲೆ ನಾನು ಹಲ್ಲೆ ಮಾಡಿದ್ದೇನು ಎನ್ನುವ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ನನ್ನ ವಿರುದ್ದ ಕೇಸು ನಡೆಯುತ್ತಿದೆ ಎಂದರೆ ಸರಿ. ನಾನು ಅಕ್ರಮವಾಗಿ ಜಮೀನು ಸಾಗುವಳಿ ಮಾಡುತ್ತಿದ್ದ ಕಾರಣ ಆರೋಪಿತರು ನನ್ನ ವಿರುದ್ದ ದೂರು ನೀಡಿದರು ಎನ್ನುವ ಉದ್ದೇಶದಿಂದ ಅವರ ವಿರುದ್ದ ಸುಳ್ಳು ಕೇಸನ್ನು ಪೋಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ತಹಶೀಲ್ದಾರ ರವರು ಸ್ಥಳಕ್ಕೆ ಬಂದು ಹೋದ ನಂತರ ನಾನು ಆರೋಪಿತರಿಗೆ ಹಲ್ಲೆ ಮಾಡಿದ್ದು ಅವರು ನನ್ನ ವಿರುದ್ದ ಮೊದಲು ದೂರು ಕೊಡಬಹುದು ಎಂದು ಆಲೋಚಿಸಿ ಅವರ ವಿರುದ್ದ ಮೊದಲು ನಾನೇ ಪೋಲೀಸರಿಗೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಸಲುವಾಗಿ ಆಸ್ಪತ್ರೆಗೆ ನಾನು ಯಾವುದೇ ಗಾಯವಾಗಿಲ್ಲದಿದ್ದರೂ ಕೂಡ ಚಿಕಿತ್ಸೆಗೆ ಸೇರಿ ಸುಳ್ಳು ದಾಖಲೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.